# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-18

Cw- 40

| | |
|---|---|
| ಸಾಕ್ಷಿದಾರರ ಹೆಸರುಃ | ಶಂಕರ ಮಾರಿಹಾಳ |
| ತಂದೆಃಗಂಡನ ಹೆಸರುಃ | ಕಲ್ಲಪ್ಪ |
| ವಯಸ್ಸುಃ | 69 ವರ್ಷ |
| ಉದ್ಯೋಗಃ | ಎಎಸ್ಪಿ |
| ವಾಸ ಸ್ಥಳಃ | ಬಿಜಾಪುರ |

**ದಿನಾಂಕ:06.12.2024 ರಂದು ಸಾಕ್ಷಿ ಹಾಜರಿದ್ದು , ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕಃ30.03.2021 ರಿಂದ 28.04.2022 ರವೆರೆಗೆ ಹಾವೇರಿ ಉಪ ವಿಭಾಗದ ಡಿವೈಎಸ್ಪಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 30.03.2021 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-39 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿದೆನು. ದಿನಾಂಕಃ03.04.2021 ರಂದು ಚಾಸಾ-18 ರಿಂದ 22 ರವರ ಹೇಳಿಕೆ ಮಾಡಿಕೊಂಡೆನು. ಅವರು ಕೋರ್ಟಿನಲ್ಲಿ ಹೇಳಿರುವ ಸಾಕ್ಷಿ ಸರಿಯಲ್ಲ.

2. ಸಂಬಂಧಪಟ್ಟ ಅಧಿಕಾರಿಗಳಿಂದ ನಿಪಿ-56 ರಿಂದ 58 ದಾಖಲೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕಃ09.04.2021 ರಂದು ಆರೋಪಿ ಮತ್ತು ಮೃತನ ಜಾತಿ ಪ್ರಮಾಣ ಪತ್ರ ನಿಪಿ-52, 53 ರಂತೆ ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕಃ03.05.2021 ರಂದು ಪಿಡಬ್ಲ್ಯುಡಿ ಇಲಾಖೆಯಿಂದ ನಿಪಿ-59 ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ಚಾಸಾ-30 ರಿಂದ 34 ರವರ ಹೇಳಿಕೆ ಮಾಡಿಕೊಂಡೆನು.

3. ದಿನಾಂಕಃ12.05.2021 ರಂದು 1 ನೇ ಆರೋಪಿರವರ ತಾಯಿ ಸುಮಂಗಲಾ ಲಾರಿ ಬಿಡುಗಡೆಗೆ ಆದೇಶ ತಂದಿದ್ದು, ಬಿಡುಗಡೆ ಮಾಡಿರುತ್ತೇನೆ.

ದಿನಾಂಕಃ18.05.2021 ರಂದು 2 ನೇ ಆರೋಪಿಯ ಜಾತಿ ಪ್ರಮಾಣಪತ್ರವನ್ನು ನಿಪಿ–53 ರಂತೆ ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕಃ05.06.2021 ರಂದು ತನಿಖೆ ಅಂತ್ಯಗೊಳಿಸಿ ಎಫ್ ಎಸ್ ಎಲ್ ವರದಿಯನ್ನು ಪೆಂಡಿಂಗ್ ಇಟ್ಟು ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದೆನು. ನಂತರದಲ್ಲಿ ಆರ್. ಎಫ್ ಎಸ್ ಎಲ್ ವರದಿ ಹಾಗೂ ಜಿಲ್ಲಾ ಆಸ್ಪತ್ರೆ ಹಾವೇರಿಯಿಂದ ರಕ್ತದ ಗುಂಪಿನ ವರದಿ ಬಂದಿದ್ದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎಸ್.ಜಿ ವಕೀಲರಿಂದಃ</u>**

4. ನಾನು ತನಿಖೆಯನ್ನು ಕೈಗೊಂಡ ನಂತರ ಪ್ರತಿಯೊಂದು ಪುಟವನ್ನು ಪರಿಶೀಲನೆ ಮಾಡಿದ್ದೇನೆ. ಸಾಕ್ಷಿದಾರರ ಹೇಳಿಕೆಗಳನ್ನು ಕೇಸಿಗೆ ಅನುಕೂಲವಾಗುವಂತೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ–19, 20, 21, 51 ರಂತೆ ಸಾಕ್ಷಿದಾರರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ–30 ರಿಂದ 34 ರವರ ಹೇಳಿಕೆಯನ್ನು ಕೇಸಿಗೆ ಅನುಕೂಲವಾಗುವಂತೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ಅವರು ನಮ್ಮ ಸಿಬ್ಬಂದಿಯವರು. ಅವರು ಘಟನೆಯ ಸಮಯದಲ್ಲಿ ರಜೆ ಹಾಕಿಲ್ಲ. ಘಟನೆಯಾದ ಎರಡು ತಿಂಗಳ ನಂತರ ಸಿಬ್ಬಂದಿಯವರ ಹೇಳಿಕೆ ಮಾಡಿಕೊಂಡಿದ್ದೇನೆ. ದೋಷಾರೋಪಣೆ ಪಟ್ಟಿ ಸಲ್ಲಿಸಲು ಅನುಕೂಲವಾಗುವಂತೆ ಸಾಕ್ಷಿದಾರರ ಹೇಳಿಕೆ ಹಾಗೂ ದಾಖಲೆಗಳನ್ನಲು ಸೃಷ್ಠಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

5. ಮೃತ ನಿಂಗಪ್ಪನ ಮೇಲೆ ಸಾಕಷ್ಟು ಕೇಸುಗಳು ಇದ್ದ ಬಗ್ಗೆ ನೆನಪಿಲ್ಲ. ಕೊಲೆ ಕೇಸಿನಲ್ಲಿ ಅವನಿಗೆ ಶಿಕ್ಷೆಯಾಗಿರುವುದು ನೆನಪಿಲ್ಲ. ನಿಪಿ–56 ರಿಂದ 58 ಬೇರೆ–ಬೇರೆ ಆಸ್ತಿಗಳ ನಂಬರ್ ಎಂದರೆ ಸರಿ. ಅವುಗಳಲ್ಲಿ ವಾಣಿಜ್ಯ ಮಳಿಗೆ ಅಂತಾ ಎಲ್ಲಿಯೂ ನಮೂದಾಗಿಲ್ಲ ಎಂದರೆ ಸರಿ. 2 ನೇ ಆರೋಪಿ ಯತ್ತಿನಹಳ್ಳಿಯವನೂ ಅಲ್ಲ, ಹಾವೇರಿಯವನೂ ಅಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಹಾವೇರಿಯವನು. 1 ಮತ್ತು 2 ನೇ ಆರೋಪಿಗಳು ಒಬ್ಬರಿಗೊಬ್ಬರಿಗೆ ಪರಿಚಯ ಇಲ್ಲ ಎಂದು ತನಿಖೆಯಲ್ಲಿ ಕಂಡು ಬಂತು ಎಂದರೆ ಸರಿಯಲ್ಲ.

6. ಮುದ್ದೆ ಮಾಲು ಬಿಳಿ ಬಟ್ಟೆಯಲ್ಲಿ ಸುತ್ತಿದ್ದು ನನ್ನ ಹತ್ತಿರ ಬಂದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ವೈದ್ಯರಿಗೆ ಅಭಿಪ್ರಾಯ ಪಡೆಯಲು ಕಳಿಸಿಲ್ಲ.

ಆರೋಪಿತರಿಗೂ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಿರೇಶ ಸ್ಟುಡಿಯೋದವರ ಹೇಳಿಕೆ ಮಾಡಿಕೊಂಡಿಲ್ಲ. ಯಾವುದೇ ಪೋಟೋಗಳಲ್ಲಿ ಸೀಲು ಮಾಡುವಂತಹ ಪೋಟೋ ಇಲ್ಲ. ಲಾರಿ ಆರೋಪಿಗಳಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

7. ಆರೋಪಿಗಳ ಪೋಟೋ ಯಾವಾಗ ತೆಗೆದಿದ್ದು ನೆನಪಿಲ್ಲ. ನಾನು ಮಾಡಿರುವ ತನಿಖೆ ನೆನಪಿಲ್ಲ ಎಂದರೆ ಸರಿಯಲ್ಲ. ನಿಪಿ–59 ರಲ್ಲಿ 06 ಮಳಿಗೆ ಅಂತಾ ಇದೆ ಎಂದರೆ ಸರಿ. ನಿಪಿ–4 ರಲ್ಲಿ 04 ರೂಂಗಳು ಇದೆ ಎಂದರೆ ಸರಿ. ಮೃತ ನಿಂಗಪ್ಪ ಕ್ರಿಮಿನಲ್ ಕೇಸು ಇರುವುದರಿಂದ ಅವನಿಗೆ ಬಹಳಷ್ಟು ವೈರಿಗಳು ಇದ್ದರು ಎಂದರೆ ಸರಿಯಲ್ಲ. ನಿಂಗಪ್ಪ ಮತ್ತು ಆರೋಪಿತರ ನಡುವೆ ಹಣಕಾಸಿನ ವ್ಯವಹಾರ ಇದ್ದ ಬಗ್ಗೆ ದಾಖಲೆಗಳನ್ನು ಕಲೆಕ್ಟ ಮಾಡಿಲ್ಲ. ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಎಲ್ಲಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.